# ಉಪತಹಶೀಲ್ದಾರರ ನ್ಯಾಯಾಲಯ, ನಾಡಕಾರ್ಯಾಲಯ, ಕಂಪ್ಲಿ.

**ವಾದಿಗಳು**

1.ಶ್ರೀ ಕರಿಬಸವರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ.
2.ಶ್ರೀ ಎ.ಉಮೇಶ ತಂದೆ ಎ.ಮಲ್ಲಯ್ಯ, ಸಾ: ಸುಗ್ಗೇನಹಳ್ಳಿ.

**ಪ್ರತಿವಾದಿಗಳು**

1.ಶ್ರೀ ಉಮಾಕಾಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ.
2.ಶ್ರೀ ಕೇಶವರೆಡ್ಡಿ ತಂದೆ ವಿರುಪಾಕ್ಷರೆಡ್ಡಿ
3.ಶ್ರೀ ಹನುಮಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ.
ಸಾ: ಸುಗ್ಗೇನಹಳ್ಳಿ ಗ್ರಾಮ.

ಉಪಸ್ಥಿತರು :- ಉಪತಹಶೀಲ್ದಾರರು,
ನಾಡಕಾರ್ಯಾಲಯ, ಕಂಪ್ಲಿ.

| ತಾಲೂಕು | ಹೋಬಳಿ | ಗ್ರಾಮ | ಸ.ನಂ | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಂಪ್ಲಿ | ಸುಗ್ಗೇನಹಳ್ಳಿ | 390/*/ಎ3/ಎ | 01.10 |

**ಪೀಠಿಕೆ:-**

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ಕಂಪ್ಲಿ ಹೋಬಳಿ ಸುಗ್ಗೇನಹಳ್ಳಿ ಗ್ರಾಮದ ಸ.ನಂ.390/*/ಎ3/ಎ ವಿಸ್ತೀರ್ಣ 1.10 ಎಕರೆ ಜಮೀನನ್ನು ಹಕ್ಕುಬದಲಾವಣೆ ಸಂಖ್ಯೆ:44/2015-16 ವಹಿವಾಟು ಸಂಖ್ಯೆ:203/2015-16 ರ ಕುರಿತಂತೆ ದಿನಾಂಕ:16.06.2016 ರಂದು ತಾಲೂಕು ಕಾರ್ಯಾಲಯದಲ್ಲಿ ನಿಗದಿತ ಅವಧಿಯೊಳಗೆ 1.ಶ್ರೀ ಉಮಾಕಾಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ, 2.ಶ್ರೀ ಕೇಶವರೆಡ್ಡಿ ತಂದೆ ವಿರುಪಾಕ್ಷರೆಡ್ಡಿ ಮತ್ತು 3.ಶ್ರೀ ಹನುಮಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ, ಸಾ: ಸುಗ್ಗೇನಹಳ್ಳಿ ಗ್ರಾಮ, ಇವರು ತಕರಾರು ಅರ್ಜಿ ಸಲ್ಲಿಸಿರುವುದರಿಂದ ಕಂದಾಯ ನಿರೀಕ್ಷಕರು ಕಂಪ್ಲಿ ಇವರು ಇದು ಒಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ನಾಡಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆಯನ್ನು ದಿನಾಂಕ:14.07.2016 ರಂದು ಪ್ರಾರಂಭಿಸಿ ದಿನಾಂಕ:15.9.2016 ರಂದು ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿದ್ದು, ಪ್ರತಿವಾದಿಗಳಾದ 1.ಶ್ರೀ ಉಮಾಕಾಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ, 2.ಶ್ರೀ ಕೇಶವರೆಡ್ಡಿ ತಂದೆ ವಿರುಪಾಕ್ಷರೆಡ್ಡಿ ಮತ್ತು 3.ಶ್ರೀ ಹನುಮಂತರೆಡ್ಡಿ ತಂದೆ ವಿರುಪಾಕ್ಷ ರೆಡ್ಡಿ, ಇವರು ಲಿಖಿತ ಹೇಳಿಕೆಯ ಮೂಲಕ ತಾವು ಗ್ರಾಮದ ಹಿರಿಯರ ಸಮ್ಮುಖದಲ್ಲಿ ರಾಜಿಯಾಗಿರುವುದರಿಂದ, ತಮ್ಮ ತಕರಾರನ್ನು ಹಿಂಪಡೆಯುತ್ತಿರುವುದಾಗಿ ಒಪ್ಪಿಗೆ ನೀಡುತ್ತಾ, ವಿಕ್ರಯದಾರರಾದ ವಾದಿ-1 ರವರು ನೋಂದಾಯಿತ ದಸ್ತಾವೇಜು ಸಂಖ್ಯೆ: 357/16-17 ದಿನಾಂಕ:19.05.2016 ರ ಕ್ರಯ ಪತ್ರದ ಪ್ರಕಾರ ಸುಗ್ಗೇನಹಳ್ಳಿ ಗ್ರಾಮದ ಸ.ನಂ.390/*/ಎ3/ಎ ವಿಸ್ತೀರ್ಣ 1.10 ಎಕರೆ ವ್ಯಾಜ್ಯದ ಜಮೀನನ್ನು ವಾದಿ-2 ರವರಿಗೆ ಕ್ರಯಕ್ಕೆ ನೀಡಿರುವುದರಿಂದ, ಪ್ರಶ್ನಿತ ಹಕ್ಕುಬದಲಾವಣೆಯನ್ವಯ ಕ್ರಯದಾರರಾದ ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಉಭಯ ಪಕ್ಷಗಾರರು ಗ್ರಾಮದ ಹಿರಿಯರ ಸಮ್ಮುಖದಲ್ಲಿ ರಾಜಿಯಾಗಿರುವುದಾಗಿ ಲಿಖಿತ ಹೇಳಿಕೆಯ ಮೂಲಕ ತಿಳಿಸುತ್ತಾ, ಸುಗ್ಗೇನಹಳ್ಳಿ ಗ್ರಾಮದ ಸ.ನಂ.390/*/ಎ3/ಎ ವಿಸ್ತೀರ್ಣ 1.10 ಎಕರೆ ವ್ಯಾಜ್ಯದ ಜಮೀನನ್ನು ವಾದಿ-1 ರವರು ನೋಂದಾಯಿತ ದಸ್ತಾವೇಜು ಸಂಖ್ಯೆ: 357/2016-17 ದಿನಾಂಕ: 19.05.2016 ರನ್ವಯ ವಾದಿ-2 ರವರ ಹೆಸರಿಗೆ ಕ್ರಯಕ್ಕೆ ನೀಡಿದ್ದು, ಅದರಂತೆ, ಹಕ್ಕುಬದಲಾವಣೆ ಮಾಡಲು ತಮ್ಮಗಳ ಯಾವುದೇ ಆಕ್ಷೇಪಣೆ ಇಲ್ಲವೆಂದು ಹಾಗೂ ತಮ್ಮ ತಕರಾರನ್ನು ಹಿಂಪಡೆಯುತ್ತಿರುವುದಾಗಿ ತಿಳಿಸಿದ ಹಿನ್ನಲೆಯಲ್ಲಿ, ವ್ಯಾಜ್ಯದ ಜಮೀನನ್ನು ಪ್ರಶ್ನಿತ ಹಕ್ಕುಬದಲಾವಣೆಯನ್ವಯ ವಾದಿ-2ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡ

## -: ಆದೇಶ :-

ಸಂ/ಕಂ/ ನಾಡಕಾ/ವಿವಾದಾಸ್ಪದ/11/2015-16 ದಿನಾಂಕ: 22-09-2016.

ಪೀಠಿಕೆಯಲ್ಲಿ ವಿವರಿಸಿದ ಕಾರಣ, ಅಂಶಗಳ ಹಿನ್ನೆಲೆಯಲ್ಲಿ ಪ್ರತಿವಾದಿ-1 ರಿಂದ 3 ರವರು ಲಿಖಿತ ಹೇಳಿಕೆಯ ಮೂಲಕ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ತಕರಾರನ್ನು ಹಿಂಪಡೆಯುತ್ತಿರುವುದಾಗಿ ತಿಳಿಸಿರುವ ಹಿನ್ನಲೆಯಲ್ಲಿ, ಪ್ರತಿವಾದಿಯ ತಕರರಾನ್ನು ವಜಾಗೊಳಿಸುತ್ತಾ, ಹೊಸಪೇಟೆ ತಾಲೂಕು, ಕಂಪ್ಲಿ ಹೋಬಳಿ, ಸುಗ್ಗೇನಹಳ್ಳಿ ಗ್ರಾಮದ ಸ.ನಂ.390/*/ಎ3/ಎ ವಿಸ್ತೀರ್ಣ 1.10 ಎಕರೆ ವ್ಯಾಜ್ಯದ ಜಮೀನನ್ನು ಉಪನೋಂದಣಾಧಿಕಾರಿ ಕಛೇರಿ ಕಂಪ್ಲಿ ಇವರ ದಸ್ತಾವೇಜು ಸಂಖ್ಯೆ:357/2016-17 ದಿನಾಂಕ: 19.05.2016 ರ ಕ್ರಯ ಪತ್ರದ ಪ್ರಕಾರ ಕ್ರಯಕ್ಕೆ ಪಡೆದಿರುವ ವಾದಿ-2 ರವರಾದ ಶ್ರೀ ಎ.ಉಮೇಶ ತಂದೆ ಎ.ಮಲ್ಲಯ್ಯ, ಸಾ: ಸುಗ್ಗೇನಹಳ್ಳಿ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ದಿನಾಂಕ: 22.09.2016 ರಂದು ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡಿ, ತಪ್ಪುಗಳನ್ನು ಸರಿಪಡಿಸಿ, ಘೋಷಿಸಲಾಯಿತು.

ಉಪತಹಶೀಲ್ದಾರರು,
ನಾಡಕಾರ್ಯಾಲಯ, ಕಂಪ್ಲಿ.

ಪ್ರತಿಯನ್ನು:-

1.ತಾಲೂಕು ಕಛೇರಿ ಹೊಸಪೇಟೆ ಭೂಮಿ ಕೇಂದ್ರ.
2.ಕಂದಾಯ ನಿರೀಕ್ಷಕರು ಕಂಪ್ಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ.
3.ಗ್ರಾಮಲೆಕ್ಕಾಧಿಕಾರಿ ಮೆಟ್ರಿ ಇವರಿಗೆ ಮಾಹಿತಿಗಾಗಿ.
4.ವಾದಿ ಮತ್ತು ಪ್ರತಿವಾದಿಗಳಿಗೆ ಮಾಹಿತಿಗಾಗಿ.
5.ಕಛೇರಿ ಕಡತಕ್ಕೆ.